# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕಾರ್ಯಪಾಲಕ ಅಭಿಯಂತರರು(ವಿ) ಕಛೇರಿ, ಮಹದೇವಪುರ ವಲಯ, ಬೆಂಗಳೂರು.

---

**ದಿನಾಂಕ: 07-11-2020ರಂದು ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೆ.ಆರ್.ಪುರ ಬಿಬಿಎಂಪಿ ಕಛೇರಿ, ವಿದ್ಯುತ್ ವಿಭಾಗ, ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:-**

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಶರತ್ ಕುಮಾರ್ – ನೋಡಲ್ ಅಧಿಕಾರಿಗಳು, ವಾರ್ಡ್- 55
2. ಶ್ರೀ.ಜಗದೀಶ್ – ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು, ವಾರ್ಡ್-55
3. ಶ್ರೀ.ಸಂಜಯ್.ಎಸ್ – ಸಹಾಯಕ ಅಭಿಯಂತರರು(ವಿದ್ಯುತ್)
4. ಶ್ರೀ.ಎಂ.ವೆಂಕಟರಮಣಪ್ಪ – ಸಹಾಯಕ ಅಭಿಯಂತರರು (ಇ-7)(ಬೆ.ವಿ.ಕಾಂ)
5. ದಿನೇಶ್- ಸಹಾಯಕ ಅಭಿಯಂತರರು, (ಇ-3)(ಬೆಂಗಳೂರು ಜಲ ಮಂಡಳಿ)
6. ಶ್ರೀ.ಜಗದೀಶ್ – ಕಿರಿಯ ಆರೋಗ್ಯ ನಿರೀಕ್ಷಕರು
7. ಬಾಲಜಿ ಬಾಬು- ಕಿರಿಯ ಅಭಿಯಂತರರು ದೇವಸಂದ್ರ, ಬೆ.ವಿ.ಕಂ
8. ಗೋವಿಂದಯ್ಯ, ನಿವಾಸಿಗಳ ಪ್ರತಿನಿಧಿ
9. ಮಂಜುನಾಥ.ಪಿ.ಎನ್. ನಿವಾಸಿಗಳ ಪ್ರತಿನಿಧಿ

*****

ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ಸಂ:52 ಸಭೆಗೆ ಎಲ್ಲಾರನ್ನು ಅಹ್ವಾನಿಸುತ್ತಾ, ಸಭೆಯ ವಿವರಗಳನ್ನು ನೀಡುವಂತೆ ಸೂಚಿಸಿದರು. ವಾರ್ಡ್ ಸಂ:52ಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು ಸಾರ್ವಜನಿಕರಿಂದ ಬಂದಂತಹ ಮನವಿಗಳು ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾಗಿರುವ ಕೆಲಸಕಾರ್ಯಗಳು ಹಾಗೂ ಘನತ್ಯಾಜ್ಯ ನಿರ್ವಹಣೆ, ಬೆಂಗಳೂರು ಜಲ ಮಂಡಳಿ ಇಲಾಖೆ, ಕಾಮಗಾರಿ ಇಲಾಖೆ ಮತ್ತು ಬೆ.ವಿ.ಕಾಂ ಇಲಾಖೆ ಇತರೆ ವಿಷಯಗಳ ವಿವರಗಳು ಈ ಕೆಳಕಂಡಂತೆ ನೀಡಿರುತ್ತಾರೆ.

1. ಕಾಶಿವಿಶ್ವನಾಥ ಬಡಾವಣೆಯಿಂದ BWSSB ರಸ್ತೆಯ ಇಕ್ಕಲೆಗಳಲ್ಲಿ ಬ್ಲಾಕ್ ಸ್ಪಾಟ್‌ನ್ನು ಸ್ಥಳೀಯರ ನೆರವಿನಿಂದ ಸ್ವಚ್ಛಗೊಳಿಸಿ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸಲಾಗಿರುತ್ತದೆ. ಸದರಿ ಸಂಸ್ಥೆಯವರಿಗೆ ಧನ್ಯವಾದವನ್ನು ಸಮರ್ಪಿಸುತ್ತಾ, ಕಿರಿಯ ಆರೋಗ್ಯ ನಿರೀಕ್ಷಕರಿಗೆ ಮುಂದೆ ಸದರಿ ಸ್ಥಳದಲ್ಲಿ ಕಸ ಸಂಗ್ರಹವಾಗದಂತೆ ನೋಡಿಕೊಳ್ಳಲು ಸೂಚಿಸಲಾಯಿತು.
2. ವಾರ್ಡ್ ಅಭಿಯಂತರರಿಗೆ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಾರ್ಡ್ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಸೂಚಿಸಲಾಯಿತು.
3. ಹಾಜರಿದ್ದ ಬೆಂಗಳೂರು ಜಲ ಮಂಡಳಿ ಅಭಿಯಂತರರು ಹಿಂದಿನ ಸಭೆಯಲ್ಲಿ ತಿಳಿಸಿದ ಕೊಳಚೆ ನೀರಿನ ಸಮಸ್ಯೆಯನ್ನು ಪರಿಹರಿಸುವುದಾಗಿ ತಿಳಿಸಿರುತ್ತಾರೆ. ಮುಂದುವರೆದಂತೆ ಬೆ.ವಿ.ಕಾಂ. ಕೇಬಲ್ ಕಾಮಗಾರಿಯಲ್ಲಿ ಬೆಂಗಳೂರು ಜಲ ಮಂಡಳಿ ರವರು ಪೈಪ್‌ಲೈನ್‌ಗಳನ್ನು ಅಗೆದು ಹಾಕದಂತೆ ಕ್ರಮ ವಹಿಸಲು ಕೋರಿದರು.
4. ಹಾಜರಿದ್ದ ಬೆ.ವಿ.ಕಾಂ. ಅಭಿಯಂತರರೊಂದಿಗೆ ಬೆಂಗಳೂರು ಜಲ ಮಂಡಳಿ ಅಭಿಯಂತರರು ಸಮನ್ವಯ ಸಾಧಿಸುವುದಾಗಿ ತಿಳಿಸಿರುತ್ತಾರೆ.

Scanned by CamScanner

5. ಬೆ.ವಿ.ಕಾಂ. ಅಧಿಕಾರಿಗಳು ಕೇಬಲ್ ಕಾಮಗಾರಿ ಹಾಗೂ ಪ್ಯಾನಲ್‌ಗಳನ್ನು ಪಾದಚಾರಿ ರಸ್ತೆ ಸಂಚಾರಿ ವಾಹನಗಳಿಗೆ ಅಡ್ಡಿಯಾಗದಂತೆ ಅಳವಡಿಸಲು ಸೂಚಿಸಲಾಯಿತು.
6. ಸಭೆಯಲ್ಲಿ ಹಾಜರಿದ್ದು ಕಸ ವಿಲೇವಾರಿ ಗುತ್ತಿಗೆದಾರರ ಸಿಬ್ಬಂದಿಯವರಿಗೆ ಒಟ್ಟಾರೆ ಕಸ ಸಂಗ್ರಹಣೆ ಸಮರ್ಪಕವಾಗಿಲ್ಲವೆಂದು ಹಲವಾರು ದೂರುಗಳು ಬಂದಿರುವುದರಿಂದ ಮುಂದಿನ ಸಭೆಯೊಳಗೆ ಸರಿಪಡಿಸಿ ವರದಿ ನೀಡಲು ಸೂಚಿಸಲಾಯಿತು ಮತ್ತು ವಿಭಾಗ ಮುಖ್ಯಸ್ಥರಿಗೆ ಈ ಬಗ್ಗೆ ಪತ್ರ ಬರೆಯಲು ತಿರ್ಮಾನಿಸಲಾಯಿತು.
7. ವಾರ್ಡ್ ವ್ಯಾಪ್ತಿಯ ಮುಖ್ಯ ರಸ್ತೆಗಳಲ್ಲಿ ನಿರ್ವಹಣ ಸಮರ್ಪಕವಾಗಿದ್ದು, ಈ ಬಗ್ಗೆ ಇಲಾಖಾ ಅಭಿಯಂತರರು ಸೂಕ್ತವಾಗಿ ಸ್ಪಂದಿಸಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಉನ್ನತ ಅಧಿಕಾರಿಗಳ ಗಮನಕ್ಕೆ ತರಲು ನಿರ್ಣಯಿಸಲಾಯಿತು.
8. ಕೋವಿಡ್–19ರ ಪರೀಕ್ಷೆಗೆ ಸಂಬಂಧಿಸಿದಂತೆ ಎಲ್ಲರ ಸಹಕಾರ ಹಾಗೂ ಪರೀಕ್ಷೆಗೊಳಪಡುವವರನ್ನು ಪ್ರೋತ್ಸಾಹಿಸಲು ಕೋರಲಾಯಿತು.

ಈ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು, ವಾರ್ಡ್ ಸಂ–52

ಪ್ರತಿಯನ್ನು:
1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಪುರ ಉಪ ವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
4. ಸಹಾಯಕ ಕಾರ್ಯಪಾಲಕ ಅಭಿಯಂತರರು(ಬೆ.ವಿ.ಕಾಂ), ಇ–7 ಉಪವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
5. ಸಹಾಯಕ ಕಾರ್ಯಪಾಲಕ ಅಭಿಯಂತರರು(ಬೆ.ವಿ.ಕಾಂ), ಇ–12 ಉಪವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ಕೆ.ಆರ್.ಪುರ ಉಪ ವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
7. ಸಹಾಯಕ ಅಭಿಯಂತರರು, ಇ–3, ಬೆಂಗಳೂರು ಜಲ ಮಂಡಳಿ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
8. ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನತ್ಯಾಜ್ಯ ನಿರ್ವಹಣೆ) ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
9. ಸಹಾಯಕ ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
10. ಕಛೇರಿ ಪ್ರತಿ

Scanned by CamScanner